

ತಂದೆ ಹರ್ವಿರ್ ಸಿಂಗ್ ಜೊತೆಗೆ ಸೈನಾ ನೆಹ್ವಾಲ್

**ಆಡುವುದೇ ಗೆಲ್ಲುವುದಕ್ಕೆ ಎಂಬ ಮಂತ್ರ ಜಪಿಸುತ್ತಿದ್ದ ಸೈನಾ ನೆಹ್ವಾಲ್, ಭಾರತದಲ್ಲಿ ಮಹಿಳೆಯರ ಬ್ಯಾಡ್ಮಿಂಟನ್ ಕ್ರೀಡೆಗೆ ಮೆರುಗು ತಂದವರು. ಸುಮಾರು ಎರಡು ದಶಕಗಳ ತಮ್ಮ ಕ್ರೀಡಾ ಪ್ರಯಾಣಕ್ಕೆ ಅವರೀಗ ವಿದಾಯ ಹೇಳುತ್ತಿದ್ದಾರೆ. ಯುವ ಸಮುದಾಯಕ್ಕೆ ಪ್ರೇರಣೆಯಾಗಿ ಸದಾ ಉಳಿಯಲಿದ್ದಾರೆ.**

ನೋವಿನಿಂದಾಗಿ ಅವರು ನಿವೃತ್ತಿ ಘೋಷಿಸಿದ್ದಾರೆ. ಆದರೆ ಅವರು ಕ್ರೀಡಾಂಕಣದಲ್ಲಿ ಮೂಡಿಸಿರುವ ಹೆಜ್ಜೆಗುರುತುಗಳು ಬಹುಕಾಲ ಉಳಿಯಲಿವೆ.

## ಮನೆಯೇ ಮೊದಲ ಪಾಠಶಾಲೆ

ಸೈನಾ ಅವರಿಗೆ ಬ್ಯಾಡ್ಮಿಂಟನ್ ಆಟವಾಡುವ ಪ್ರೇರಣೆ ದೊರಕಿದ್ದು ಅವರ ಮನೆಯಲ್ಲಿಯೇ. ತಂದೆ ಹರ್ವಿರ್ ಸಿಂಗ್ ಮತ್ತು ತಾಯಿ ಉಷಾರಾಣಿ ಅವರು ಹರಿಯಾಣ ರಾಜ್ಯದ ಬ್ಯಾಡ್ಮಿಂಟನ್ ಆಟಗಾರರಾಗಿದ್ದವರು. ಫಿಟ್‌ನೆಸ್‌ಗಾಗಿ ಅಭ್ಯಾಸ ಮಾಡುತ್ತಿದ್ದರು. ಭಾರತ ಕೃಷಿ ಸಂಶೋಧನಾ ಸಂಸ್ಥೆ (ಐಸಿಎಆರ್)ಯಲ್ಲಿ ಹಿರಿಯ ವಿಜ್ಞಾನಿಯೂ ಆಗಿದ್ದ ಹರ್ವಿರ್ ಸಿಂಗ್ ಅವರಿಗೆ ಹೈದರಾಬಾದಿಗೆ ವರ್ಗಾವಣೆಯಾಗಿದ್ದು ಒಳ್ಳೆಯದೇ ಆಯಿತು. ಆಗ ಸೈನಾಗೆ ಆರು ವರ್ಷ ಆಗಿತ್ತು.

ಕ್ರೀಡೆಯಲ್ಲಿ ಬಹಳಷ್ಟು ಆಸಕ್ತಿ ತೋರುತ್ತಿದ್ದ ಸೈನಾ ಕರಾಟೆ ಕಲಿಯುತ್ತಿದ್ದರು. ಬೇಜಾರು ಕಳೆಯಲು ಬ್ಯಾಡ್ಮಿಂಟನ್ ಆಡತೊಡಗಿದರು. ಸೈನಾ ಅವರ ಚುರುಕಾದ ದೃಷ್ಟಿ ಮತ್ತು ಕೈಕಾಲುಗಳ ಚಲನೆಯ ಸಮನ್ವಯತೆ ಅಮೋಘವಾಗಿತ್ತು. ಚುರುಕಾಗಿ ಆಡುತ್ತಿದ್ದ ಹುಡುಗಿಯ ಪ್ರತಿಭೆಯನ್ನು ಗುರುತಿಸಿದ ಅಪ್ಪ, ಅಮ್ಮ ತರಬೇತಿ ಕೊಡಿಸಲು ನಿರ್ಧರಿಸಿದರು. ಅನುಭವಿ ಕೋಚ್ ನಾನಿ ಪ್ರಸಾದ್ ಅವರ ಬಳಿ ತರಬೇತಿಗೆ ಸೇರಿಸಿದರು. ಮನೆಯಿಂದ 25 ಕಿ.ಮೀ. ದೂರದಲ್ಲಿದ್ದ ಅಕಾಡೆಮಿಗೆ ಪ್ರತಿದಿನ ಬೆಳಗಿನ ಜಾವ ಸೈನಾ ಹೋಗಬೇಕಿತ್ತು. ಹರ್ವಿರ್ ಅವರೇ ಕರೆದೊಯ್ಯುತ್ತಿದ್ದರು. ಅಪ್ಪನನ್ನು ಗಟ್ಟಿಯಾಗಿ ಬಿಗಿದಪ್ಪಿ ನಿದ್ದೆಗೆ ಜಾರುತ್ತಿದ್ದ ಪುಟ್ಟ ಹುಡುಗಿ ಸೈನಾ ಆಟದಂಕಣದಲ್ಲಿ ಮಾತ್ರ ಚೂಟಿ ಚುರುಕು. ಒಂದು ಹಂತದವರೆಗೆ ಬೆಳೆದ ನಂತರ ಗೋಪಿಚಂದ್ ಅಕಾಡೆಮಿ ಸೇರಿಕೊಂಡರು. ಅದು ಜೀವನಕ್ಕೆ ತಿರುವು ನೀಡಿತು.

ಸ್ಥಳೀಯ ಮತ್ತು ರಾಜ್ಯ ಮಟ್ಟದ ಟೂರ್ನಿಗಳಲ್ಲಿ ಅವರ ಆಟ ಅರಳತೊಡಗಿತು. ಸೋಲುಗಳನ್ನು ಸುಲಭವಾಗಿ ಒಪ್ಪಿಕೊಳ್ಳುವ ಜಾಯಮಾನವೇ ಅಲ್ಲ ಸೈನಾ ಅವರದ್ದು. ಆಡುವುದೇ ಗೆಲ್ಲುವುದಕ್ಕಾಗಿ ಎಂಬ ಮಂತ್ರವನ್ನು ಜಪಿಸುತ್ತಿದ್ದರು. ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಲು ಶುರು ಮಾಡಿದಾಗ ಕಾಲಘಟ್ಟದಲ್ಲಿ ಚೀನಾ, ಜಪಾನ್, ಸಿಂಗಪುರ, ಸ್ಪೇನ್, ಡೆನ್ಮಾರ್ಕ್ ಮತ್ತು ಮಲೇಷ್ಯಾದ ಖ್ಯಾತನಾಮ ಆಟಗಾರ್ತಿಯರು ಕಣದಲ್ಲಿದ್ದರು.

ಕ್ರಮೇಣವಾಗಿ ತಮ್ಮ ಸಾಮರ್ಥ್ಯ ಮೆರೆಯತೊಡಗಿದರು. 2004ರಲ್ಲಿ ಯೂತ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚು ಗೆದ್ದ ಮಿಶ್ರ ತಂಡದಲ್ಲಿ ಸೈನಾ ಇದ್ದರು. 2008ರಲ್ಲಿ ಕಾಮನ್‌ವೆಲ್ತ್ ಯೂತ್ ಗೇಮ್ಸ್ ಮತ್ತು ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು. 2010, 2016 ಮತ್ತು 2018ರಲ್ಲಿ ಅವರು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು. ರಿಯೊ ಒಲಿಂಪಿಕ್ಸ್‌ನಲ್ಲಿ ಅವರು ಗಾಯದ ಕಾರಣದಿಂದಾಗಿ ಅರ್ಧದಿಂದ ಹಿಂದೆ ಸರಿದಿದ್ದರು.

## ವಿವಾದಗಳು-ತಿರುಗೇಟುಗಳು

ಆಟದಂಗಳದಲ್ಲಿ ಸಾಧನೆಗಳ ಜೊತೆಗೆ ಅಂಗಳದ ಹೊರಗೂ ಸೈನಾ ಹಲವು ಬಾರಿ ಸುದ್ದಿಯಲ್ಲಿದ್ದರು. ಗೋಪಿಚಂದ್ ಜೊತೆಗಿನ ವೈಮನಸ್ಸು ಕೂಡ ಬಹಳಷ್ಟು ಸುದ್ದಿ ಮಾಡಿತ್ತು. ಕೆಲಕಾಲ ದೂರವಿದ್ದ ಸೈನಾ ಮತ್ತೆ ಗೋಪಿ ಅಕಾಡೆಮಿಗೆ ಮರಳಿದ್ದರು.

ಅವರು ಲಂಡನ್ ಒಲಿಂಪಿಕ್ ಕೂಟದಲ್ಲಿ ಕಂಚು ಗೆದ್ದಾಗಲೂ ಕೆಲವರು ಲೇವಡಿ ಮಾಡಿದ್ದರು. ಕಂಚಿನ ಪದಕ ಸುತ್ತಿನ ಪಂದ್ಯದ ಅರ್ಧದಲ್ಲಿಯೇ ಎದುರಾಳಿ ಚೀನಾದ ವಾಂಗ್ ಷಿನ್ಲೆ ಗಾಯಗೊಂಡಿದ್ದರು. ಇದರಿಂದಾಗಿ ಅವರು ಹಿಂದೆ ಸರಿದರು. ಸೈನಾಗೆ ಕಂಚು ಲಭಿಸಿತು. ಅದಕ್ಕೆ ಇದು ಗೆದ್ದ ಪದಕವಲ್ಲ, ಸಿಕ್ಕಿದ್ದು ಅದೃಷ್ಟಶಾಲಿ ಸೈನಾ ಎಂದವರು ಹಲವರು.

‘ಚಿಕ್ಕಂದಿನಿಂದಲೂ ಪಟ್ಟ ಶ್ರಮ, ತ್ಯಾಗಗಳಿಗೆ ಒಲಿದ ಪದಕ ಇದು. ಅದೃಷ್ಟದ್ದು ಅಲ್ಲ. 13 ವರ್ಷಗಳ ನಿರಂತರ ಶ್ರಮವಿದೆ’ ಎಂದು ಸೈನಾ ಅವರ ತಂದೆ ಹರ್ವಿರ್ ಹೇಳಿದ್ದರು.

ಒಲಿಂಪಿಕ್ ಪದಕದ ನಂತರವೂ ಅವರ ಸಾಧನೆಗಳು ಹಲವು. 2015ರ ಜಕಾರ್ತ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ, 2017ರ ಗ್ಲಾಸ್ಗೊ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು, 2024 ಮತ್ತು 2016ರ ಉಬರ್ ಕಪ್‌ನಲ್ಲಿ ಭಾರತ ತಂಡದಲ್ಲಿ ಕಂಚು, 2014, 2018ರ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕಗಳು ಸೇರಿ ಹಲವು ಸಾಧನೆ ಮಾಡಿದರು.

ಸೈನಾ ಮತ್ತು ಪಿ.ವಿ. ಸಿಂಧು ಅವರ ನಡುವೆ ವೈಮನಸ್ಸು ಇದೆ ಎಂಬ ವದಂತಿಗಳು ಹಬ್ಬಿದ್ದವು. ಆಗ ಸೈನಾ ಅವರೇ ಮೌನ ಮುರಿದು, ‘ನಮ್ಮಿಬ್ಬರ ನಡುವೆ ಯಾವುದೇ ವೈಮನಸ್ಸು ಇಲ್ಲ’ ಎಂದು ತಿಳಿಗೊಳಿಸಿದ್ದರು. ಜೊತೆಗೂ ಆಡಿದ್ದರು.

ಅವರ ಆಟ ಮತ್ತು ವ್ಯಕ್ತಿತ್ವ ಎರಡೂ ನೇರಾನೇರ. ಅಂತರರಾಷ್ಟ್ರೀಯ ಆಟಗಾರ ಪರುಪಳ್ಳಿ ಕಶ್ಯಪ್ ಅವರನ್ನು ಮದುವೆಯಾದರು. ಇತ್ತೀಚೆಗೆ ವಿಚ್ಛೇದನ ನೀಡುವುದಾಗಿ ಹೇಳಿದ್ದರು. ಕೆಲವು ಕಾಲದ ನಂತರ ವಿಚ್ಛೇದನ ನಿರ್ಧಾರ ಬದಲಿಸಿದ್ದು, ಜೊತೆಗೆ ಇರುತ್ತೇವೆ ಎಂದೂ ಪ್ರಕಟಿಸಿದ್ದರು. ಪಾಡ್‌ಕಾಸ್ಟ್ ಮಾತುಕತೆಗಳು ಮತ್ತು ಜಾಹೀರಾತುಗಳಲ್ಲಿ ಸೈನಾ ಸಕ್ರಿಯರಾಗಿದ್ದಾರೆ. ಕೆಲವು ಚಾರಿಟಿ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದ್ದಾರೆ.

ವೃತ್ತಿಜೀವನದುದ್ದಕ್ಕೂ ಗಾಯಗಳ ಕಾಟ ಅವರಿಗೆ ತಪ್ಪಿರಲಿಲ್ಲ. ಎಲ್ಲವನ್ನೂ ದಾಟಿ ಬಂದಿದ್ದರು. ಸಾಧನೆ ಮಾಡಿದ್ದರು. ಆದರೆ ಈ ಬಾರಿ ಮೊಣಕಾಲು ನೋವು ಅಪಾರವಾಗಿ ಕಾಡಿದೆ. ಕಳೆದ ಎರಡು ವರ್ಷಗಳಿಂದ ಆಟದಿಂದ ದೂರವೇ ಇದ್ದರು. ಇದೀಗ ನಿವೃತ್ತಿ ಘೋಷಿಸಿದರು. ಇದರೊಂದಿಗೆ ಒಂದು ಯುಗದ ಅಂತ್ಯವಾದಂತಾಗಿದೆ.